# GOVERNMENT OF KARNATAKA

# KARNATAKA LOKAYUKTA

No.UPLOK-2/DE/81/2020/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 03rd January, 2023.

## RECOMMENDATION

Sub: Departmental Inquiry against Shri D.K.Lingaraju, the then Municipal Commissioner (Originally Commerce and Industries Department) City Municipal Council, Kollegala, Chamarajanagar District-reg.

Ref: 1) Government Order No.ನಅಇ 82 ಡಿಎಂಸಿ 2019, Bengaluru, dated: 04/05/2020.

2) Nomination Order No.UPLOK-2/DE/81/2020, Bengaluru, dated: 14/05/2020 of Upalokayukta, State of Karnataka, Bengaluru.

3) Inquiry Report dated: 31/12/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 04/05/2020 initiated the disciplinary proceedings against Shri D.K.Lingaraju, the then Municipal Commissioner (Originally Commerce and Industries Department) City Municipal Council, Kollegala, Chamarajanagar District (hereinafter referred to as Delinquent

Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-2/DE/81/2020, Bengaluru, dated: 14/05/2020 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO, Shri D.K.Lingaraju, the then Municipal Commissioner (Originally Commerce and Industries Department) City Municipal Council, Kollegala, Chamarajanagar District was tried for the following charges:

**<u>ಅನುಬಂಧ–1</u>**

**<u>ದೋಷಾರೋಪಣೆ</u>**

ಆ.ಸ.ನೌ. ಶ್ರೀ ಡಿ.ಕೆ.ಲಿಂಗರಾಜು, ಹಿಂದಿನ ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯಲ್ಲಿ ಬರುವ ಮುಖ್ಯ ರಸ್ತೆಯಲ್ಲಿ ವಾಣಿಜ್ಯ ಕಟ್ಟಡಕ್ಕೆ ಪರವಾನಗಿ ನೀಡಿದ್ದು, ಮುಖ್ಯ ರಸೆಯಲ್ಲಿರುವ ಕಟ್ಟಡಕ್ಕೆ ವ್ಯಾಪಾರಕ್ಕಾಗಿ ಬರುವ ಜನರಿಗೆ ವಾಹನ ನಿಲ್ಲಿಸಲು ಸ್ಥಳಾವಕಾಶವಿಲ್ಲದಂತಾಗಿ ರಸ್ತೆಯಲ್ಲಿ ನಿಲ್ಲಿಸುವಂತಾಗಿದ್ದು, ವಾಹನ ನಿಲುಗಡೆ ಸಲುವಾಗಿ ಸರಿಯಾದ ಸ್ಥಳವನ್ನು ಕಾಯ್ದಿರಿಸಿ ನಿಯಮಾನುಸಾರ ಷರತ್ತುಗಳನ್ನು ವಿಧಿಸಿ ಪರವಾನಗಿ ನೀಡಬೇಕಿದ್ದು, ಅಗತ್ಯ ಕ್ರಮವಹಿಸದೆ ಇರುವುದು ಮತ್ತು ಅನೇಕ ವಾಣಿಜ್ಯ ಕಟ್ಟಡಗಳನ್ನು ಅನಧಿಕೃತವಾಗಿ ನಿರ್ಮಿಸಿರುವುದಾಗಿ ತನಿಖಾಧಿಕಾರಿಯವರ ವರದಿಯಿಂದ ಕಂಡು ಬಂದಿರುವ ಹಿನ್ನೆಲೆಯಲ್ಲಿ, ಅನಧಿಕೃತ ಕಟ್ಟಡ ನಿರ್ಮಾಣದ ವಿರುದ್ಧ ಅಗತ್ಯ ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿರುವುದು ಹಾಗೂ ಕರ್ನಾಟಕ ಮುನಿಸಿಪಾಲಿಟಿಸ್ ಕಾಯ್ದೆ 1964ರ ಕಲಂ 180, 187 ರೀತ್ಯಾ ಅಕ್ರಮ ಕಟ್ಟಡಗಳ ನಿರ್ಮಾಣಗಳ ಅವಧಿಯಲ್ಲಿ ಅಗತ್ಯ ಕ್ರಮ ವಹಿಸುವ ಹೊಣೆಗಾರಿಕೆ ಹಾಗೂ ಕರ್ತವ್ಯಗಳನ್ನು ಹೊಂದಿರುವುದರಿಂದ ಅಗತ್ಯ ಕ್ರಮ ಜರುಗಿಸದೇ ಕರ್ತವ್ಯಲೋಪ **ಎಸಗಿರುತ್ತೀರಿ.**

ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು,

ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) (i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has '**Partly Proved**' the charges leveled against DGO, Shri D.K.Lingaraju, the then Municipal Commissioner (Originally Commerce and Industries Department) City Municipal Council, Kollegala, Chamarajanagar District.

5. On perusal of the Inquiry Report, in order to prove the guilt of the DGO, the Disciplinary Authority has examined two witnesses i.e., PW-1 and PW-2 and Ex. P-1 to P-8 documents were got marked.

6. As per the First Oral Statement of DGO furnished by the Inquiry Officer, DGO, Shri D.K.Lingaraju will retire from service on 31/05/2029.

7. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

8. Having regard to the nature of charge **'Partly Proved'** against DGO, Shri D.K.Lingaraju, the then Municipal Commissioner (Originally Commerce and Industries Department) City Municipal Council, Kollegala, Chamarajanagar District and on consideration of the totality of circumstances:-

> "It is hereby recommended to the Government to impose penalty of withholding two annual increments payable to DGO, Shri D.K.Lingaraju, the then Municipal Commissioner (Originally Commerce and Industries Department) City Municipal Council, Kollegala, Chamarajanagar District with cumulative effect".

9. Action taken in the matter shall be intimated to this Authority.

Connected records are enclosed herewith.

03/01/23

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-81/2020/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 31/12/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ **ಶ್ರೀ. ಡಿ.ಕೆ ಲಿಂಗರಾಜು,** ಹಿಂದಿನ ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/1068/2017/ಪಿಪಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 02/11/2019.
2. ಸರ್ಕಾರದ ಆದೇಶ ಸಂಖ್ಯೆ: ನಅಇ 82 ಡಿಎಂಕೆ 2019, ಬೆಂಗಳೂರು, ದಿನಾಂಕ: 04/05/2020.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/81/2020, ಬೆಂಗಳೂರು ದಿನಾಂಕ: 14/05/2020.

* * * * * *

ಈ ದೂರನ್ನು, ದೂರುದಾರರಾದ **ಶ್ರೀ. ಎಂ ದಶರಥ** ಬಿನ್ ಕೆ ಮಾದಯ್ಯ, ಹಳೇ ಅಣಗಳ್ಳಿ ಗ್ರಾಮ, ಕೊಳ್ಳೇಗಾಲ ಪೋಸ್ಟ್, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ **ಶ್ರೀ. ಡಿ.ಕೆ ಲಿಂಗರಾಜು,** ಹಿಂದಿನ ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ಕೊಳ್ಳೇಗಾಲ ನಗರಸಭಾ ವ್ಯಾಪ್ತಿಯಲ್ಲಿ ಬರುವ ವಾಸಸ್ಥಾನದ ಕಟ್ಟಡದಲ್ಲಿ ವಾಣಿಜ್ಯ ವ್ಯಾಪಾರ ನಡೆಸಲು ಸಂಬಂಧಪಟ್ಟ ನಗರಸಭಾ ಪೌರಾಯುಕ್ತರು ಪಾರ್ಕಿಂಗ್ ವ್ಯವಸ್ಥೆ ಮಾಡಿಸದೇ ವ್ಯಾಪಾರ ಮಾಡಲು ಅನುಮತಿ ನೀಡಿರುತ್ತಾರೆ. ಇದರಿಂದ ರಸ್ತೆಯಲ್ಲಿ

ತಿರುಗಾಡುವ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತದೆ ಅಂತಾ ದೂರಿರುತ್ತಾರೆ. ಆದ್ದರಿಂದ, ಇವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿರುತ್ತಾರೆ.

ನಂತರ ಸದರಿ ದೂರನ್ನು ಆಪಾದಿಸಿದ ವಿಷಯದ ಬಗ್ಗೆ ತನಿಖೆಯನ್ನು ಮಾಡಿ ತನಿಖಾ ವರದಿಯನ್ನು ಸಲ್ಲಿಸಲು ಪೋಲಿಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಾಮರಾಜನಗರ ಇವರನ್ನು ತನಿಖಾಧಿಕಾರಿಯೆಂದು ನೇಮಿಸಿದ್ದು, ಇವರು ತನಿಖೆಯನ್ನು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 04/05/2020 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 14/05/2020 ರಂದು ಅಪರ ನಿಬಂಧಕರು, ವಿಚಾರಣೆಗಳು–14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು ಇರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು–14 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 03/06/2020 ರಂದು ಕಳುಹಿಸಲಾಗಿರುತ್ತದೆ.

# ಅನುಬಂಧ-1

## ದೋಷಾರೋಪಣೆ

2. ಆ.ಸ.ನೌ. ಶ್ರೀ ಡಿ.ಕೆ.ಲಿಂಗರಾಜು, ಹಿಂದಿನ ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ನಗರಸಭೆ ವ್ಯಾಪ್ತಿಯಲ್ಲಿ ಬರುವ ಮುಖ್ಯ ರಸ್ತೆಯಲ್ಲಿ ವಾಣಿಜ್ಯ ಕಟ್ಟಡಕ್ಕೆ ಪರವಾನಗಿ ನೀಡಿದ್ದು, ಮುಖ್ಯ ರಸೆಯಲ್ಲಿರುವ ಕಟ್ಟಡಕ್ಕೆ ವ್ಯಾಪಾರಕ್ಕಾಗಿ ಬರುವ ಜನರಿಗೆ ವಾಹನ ನಿಲ್ಲಿಸಲು ಸ್ಥಳಾವಕಾಶವಿಲ್ಲದಂತಾಗಿ ರಸ್ತೆಯಲ್ಲಿ ನಿಲ್ಲಿಸುವಂತಾಗಿದ್ದು, ವಾಹನ ನಿಲುಗಡೆ ಸಲುವಾಗಿ ಸರಿಯಾದ ಸ್ಥಳವನ್ನು ಕಾಯ್ದಿರಿಸಿ ನಿಯಮಾನುಸಾರ ಷರತ್ತುಗಳನ್ನು ವಿಧಿಸಿ ಪರವಾನಗಿ ನೀಡಬೇಕಿದ್ದು, ಅಗತ್ಯ ಕ್ರಮವಹಿಸದೆ ಇರುವುದು ಮತ್ತು ಅನೇಕ ವಾಣಿಜ್ಯ ಕಟ್ಟಡಗಳನ್ನು ಅನಧಿಕೃತವಾಗಿ ನಿರ್ಮಿಸಿರುವುದಾಗಿ ತನಿಖಾಧಿಕಾರಿಯವರ ವರದಿಯಿಂದ ಕಂಡು ಬಂದಿರುವ ಹಿನ್ನೆಲೆಯಲ್ಲಿ, ಅನಧಿಕೃತ ಕಟ್ಟಡ ನಿರ್ಮಾಣದ ವಿರುದ್ಧ ಅಗತ್ಯ ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿರುವುದು ಹಾಗೂ ಕರ್ನಾಟಕ ಮುನಿಸಿಪಾಲಿಟಿಸ್ ಕಾಯ್ದೆ 1964ರ ಕಲಂ 180, 187 ರೀತ್ಯಾ ಅಕ್ರಮ ಕಟ್ಟಡಗಳ ನಿರ್ಮಾಣಗಳ ಅವಧಿಯಲ್ಲಿ ಅಗತ್ಯ ಕ್ರಮ ವಹಿಸುವ ಹೊಣೆಗಾರಿಕೆ ಹಾಗೂ ಕರ್ತವ್ಯಗಳನ್ನು ಹೊಂದಿರುವುದರಿಂದ ಅಗತ್ಯ ಕ್ರಮ ಜರುಗಿಸದೇ ಕರ್ತವ್ಯಲೋಪ **ಎಸಗಿರುತ್ತೀರಿ.**

3. ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1) (i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

4. **ದೂರಿನ ಸಂಕ್ಷಿಪ್ತ ವಿವರಣೆ:** ಕೊಳ್ಳೇಗಾಲ ನಗರಸಭಾ ವ್ಯಾಪ್ತಿಯಲ್ಲಿ ಬರುವ ವಾಸ ಸ್ಥಾನದ ಕಟ್ಟಡದಲ್ಲೇ ವಾಣಿಜ್ಯ ವ್ಯಾಪಾರ ನಡೆಸಲು ಸಂಬಂಧಪಟ್ಟ ನಗರಸಭಾ ಪೌರಾಯುಕ್ತರು ಪಾರ್ಕಿಂಗ್ ವ್ಯವಸ್ಥೆ ಮಾಡಿಸದೆ ವ್ಯಾಪಾರ ನಡೆಸಲು ಅನುಮತಿ ನೀಡುತ್ತಿದ್ದಾರೆ. ಇದರಿಂದ ರಸ್ತೆಯಲ್ಲಿ ತಿರುಗಾಡುವ ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗುತ್ತಿದೆ ಎಂದು ಆಪಾದಿಸಿರುತ್ತಾರೆ.

5. **ಆ.ಸ.ನೌಕರರ ಆಕ್ಷೇಪಣೆಗಳು:-**

   "ಕೊಳ್ಳೇಗಾಲ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಪ್ರದೇಶದ ಕಟ್ಟಡಗಳಲ್ಲಿ ಹಾಲಿ ನಡೆಯುತ್ತಿರುವ ವಾಣಿಜ್ಯ ಚಟುವಟಿಕೆಗಳು ಪುರಸಭಾ ಯೋಜನಾ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಯೋಜನೆಯಂತೆ ನಿಗಧಿಪಡಿಸಲಾದ ಅಂಗಡಿ ಮಳಿಗೆಗಳಲ್ಲಿ ವಾಣಿಜ್ಯ ವಹಿವಾಟು ನಡೆಸುತ್ತಿದ್ದು, ವಾಣಿಜ್ಯಕ್ಕೆಂದು ನಿಗಧಿಯಾಗಿರುವ ಪ್ರದೇಶಗಳಲ್ಲಿ ಕನಿಷ್ಟ 30 ಅಡಿಯಿಂದ ಗರಿಷ್ಟ 40-50 ಅಡಿಗಳ ರಸ್ತೆ ಇದ್ದು, ಸಾರ್ವಜನಿಕ ಸಂಚಾರಕ್ಕೆ ಯಾವುದೇ ತೊಂದರೆ ಇರುವುದಿಲ್ಲ. ರಸ್ತೆಯ ಎರಡು ಬದಿಗಳಲ್ಲಿ ದಿನಂಪ್ರತಿಯಂತೆ ಪ್ರತಿದಿನ ಪೊಲೀಸ್ ಇಲಾಖೆಯು ನಿಗಧಿಪಡಿಸಿರುವಂತೆ ವಾಹನಗಳನ್ನು ರಸ್ತೆ ಬದಿಗಳಲ್ಲಿ ಸಾರ್ವಜನಿಕರು ಪಾರ್ಕಿಂಗ್ ಮಾಡುತ್ತಿದ್ದು, ದೂರುದಾರರು ದೂರಿರುವಂತೆ ಸಾರ್ವಜನಿಕರಿಗೆ ವಾಹನಗಳನ್ನು ಪಾರ್ಕಿಂಗ್ ಮಾಡಲು ಯಾವುದೇ ತೊಂದರೆ ಇರುವುದಿಲ್ಲ ಹಾಗೂ ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ಈ ನಗರಸಭೆಯಿಂದ ಯಾವುದೇ ಅನುಮತಿ ನೀಡುತ್ತಿರುವುದಿಲ್ಲ" ಎಂದು ನಮೂದಿಸಿರುತ್ತಾರೆ.

B

6. **ಫಿರ್ಯಾದುದಾರರ ಪ್ರತ್ಯುತ್ತರ:–**

ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ನಗರಸಭೆಯಿಂದ ಯಾವುದೇ ಅನುಮತಿ ನೀಡುತ್ತಿರುವುದಿಲ್ಲವೆಂದು ನಮೂದಿಸಿದ್ದು ವಸತಿ ಪ್ರದೇಶದಲ್ಲಿ ವಾಣಿಜ್ಯ ಕಟ್ಟಡಗಳು ಕಟ್ಟಿಕೊಂಡು ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿರುತ್ತಾರೆ. ಕಟ್ಟಡ ಕಟ್ಟಲು ನಗರಸಭೆ ಅನುಮತಿ ನೀಡದೆ ಕಟ್ಟಡವನ್ನು ಯಾವ ರೀತಿ ಕಟ್ಟುತ್ತಾರೆ? ಇದನ್ನು ನಗರಸಭೆಯವರು ಗಮನಿಸುವುದಿಲ್ಲವೆ? ಅಲ್ಲದೆ, ವಾಣಿಜ್ಯ ಕಟ್ಟಡದವರಿಂದ ಟ್ರೇಡ್ ಲೈಸೆನ್ಸ್ ಕರ ಪಡೆಯುತ್ತಿಲ್ಲವೆ? ತಾವು ಖುದ್ದು ಸ್ಥಳಕ್ಕೆ ಬಂದು ಸ್ಥಳ ಪರಿಶೀಲನೆ ಕಾರ್ಯ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

7. **ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೊಲೀಸ್, ಚಾಮರಾಜನಗರ ಇವರು ಸಲ್ಲಿಸಿರುವ ತನಿಖಾ ವರದಿಯ ಅಂಶಗಳು:**

ಆ.ಸ.ನೌಕರರ ಕಛೇರಿಯ ದಾಖಲೆಗಳು ಹಾಗೂ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆರವರ ಕಚೇರಿಯ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ. ಎದುರುದಾರರು ಕರ್ತವ್ಯದಲ್ಲಿದ್ದಾಗ ವಾಣಿಜ್ಯ ಕಟ್ಟಡದ ಸಲುವಾಗಿ ನೀಡಿದ ಪರವಾನಗಿಯ ವಿವರಗಳು ಮತ್ತು ಇತರ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಸಂಖ್ಯೆ. | ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯ ಪುಟ ಸಂಖ್ಯೆ | ಪರವಾನಗಿ ನೀಡಿದ ವರ್ಷ | ಕಟ್ಟಡ ಸ್ವರೂಪ | ಕಟ್ಟಡ ಇರುವ ಸ್ಥಳ |
|---|---|---|---|---|
| 1. | ಪುಟ ಸಂಖ್ಯೆ: 92 | 2016 | ವಾಣಿಜ್ಯ ಕಟ್ಟಡ | ಮುಖ್ಯ ರಸ್ತೆಯಲ್ಲಿ |
| 2. | ಪುಟ ಸಂಖ್ಯೆ: 674 | 2014 | ವಾಣಿಜ್ಯ ಕಟ್ಟಡ | ಕಾವೇರಿ ರಸ್ತೆಯಲ್ಲಿ |
| 3. | ಪುಟ ಸಂಖ್ಯೆ: 135 | 2016 | ವಾಣಿಜ್ಯ ಕಟ್ಟಡ | ಗರಡಿ ಬೀದಿ ರಸ್ತೆಯಲ್ಲಿ |
| 4. | ಪುಟ ಸಂಖ್ಯೆ: 116 | 2016 | ಅನಧಿಕೃತ ವಾಣಿಜ್ಯ ಕಟ್ಟಡ | – |

| | | | | |
|---|---|---|---|---|
| 5. | ಪುಟ ಸಂಖ್ಯೆ: 242 | 2016 | ಅನಧಿಕೃತ ವಾಣಿಜ್ಯ ಕಟ್ಟಡ | – |
| 6. | ಪುಟ ಸಂಖ್ಯೆ: 361 | 2015 | ಅನಧಿಕೃತ ವಾಣಿಜ್ಯ ಕಟ್ಟಡ | – |
| 7. | ಪುಟ ಸಂಖ್ಯೆ: 384 | 2017 | ಅನಧಿಕೃತ ವಾಣಿಜ್ಯ ಕಟ್ಟಡ | – |
| 8. | ಪುಟ ಸಂಖ್ಯೆ: 414 | 2016 | ಅನಧಿಕೃತ ವಾಣಿಜ್ಯ ಕಟ್ಟಡ | – |
| 9. | ಪುಟ ಸಂಖ್ಯೆ: 436 | 2016 | ಅನಧಿಕೃತ ವಾಣಿಜ್ಯ ಕಟ್ಟಡ | – |
| 10. | ಪುಟ ಸಂಖ್ಯೆ: 453 | 2017 | ಅನಧಿಕೃತ ವಸತಿ ಕಟ್ಟಡ | – |
| 11. | ಪುಟ ಸಂಖ್ಯೆ: 509 | 2017 | ಅನಧಿಕೃತ ವಸತಿ ಕಟ್ಟಡ | – |
| 12. | ಪುಟ ಸಂಖ್ಯೆ: 527 | 2016 | ಅನಧಿಕೃತ ವಸತಿ ಕಟ್ಟಡ | – |
| 13. | ಪುಟ ಸಂಖ್ಯೆ: 532 | 2016 | ಅನಧಿಕೃತ ವಸತಿ ಕಟ್ಟಡ | – |
| 14. | ಪುಟ ಸಂಖ್ಯೆ: 561 | 2016 | ಅನಧಿಕೃತ ವಸತಿ ಕಟ್ಟಡ | – |
| 15. | ಪುಟ ಸಂಖ್ಯೆ: 572 | 2016 | ಅನಧಿಕೃತ ವಾಣಿಜ್ಯ ಕಟ್ಟಡ | – |
| 16. | ಪುಟ ಸಂಖ್ಯೆ: 640 | 2017 | ಅನಧಿಕೃತ ವಾಣಿಜ್ಯ ಕಟ್ಟಡ | – |
| 17. | ಪುಟ ಸಂಖ್ಯೆ: 674 | 2014 | ಅನಧಿಕೃತ ವಾಣಿಜ್ಯ ಕಟ್ಟಡ | – |
| 18. | ಪುಟ ಸಂಖ್ಯೆ: 700 | 2016 | ಅನಧಿಕೃತ ವಾಣಿಜ್ಯ ಕಟ್ಟಡ | – |

8. ಆ.ಸ.ನೌಕರರು ಕರ್ತವ್ಯದಲ್ಲಿದಂತಹ ಅವಧಿಯಲ್ಲಿ ಸದರಿ ಕಟ್ಟಡಗಳು ನಿರ್ಮಾಣವಾಗಿರುವುದು ಮೇಲ್ನೋಟಕ್ಕೆ ದಾಖಲೆಗಳಿಂದ ಕಂಡುಬಂದಿರುತ್ತದೆ. ಸದರಿ ಕಟ್ಟಡಗಳು ಮುಖ್ಯ ರಸ್ತೆಯಲ್ಲಿದ್ದು, ವಾಹನ ಸಂಚಾರವು ಹೆಚ್ಚಾಗಿದ್ದು, ವ್ಯಾಪಾರಕ್ಕೆ ಬಂದ ಜನರಿಗೆ ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸುವಂತಹ ಪರಿಸ್ಥಿತಿ ಉಂಟಾಗಿರುತ್ತದೆ.

B

ಎದುರುದಾರರು ಅನಧಿಕೃತ ಕಟ್ಟಡಗಳ ನಿರ್ಮಾಣದ ಹಂತದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸದೆ ಇರುವುದು ಕಂಡುಬಂದಿರುತ್ತದೆ ಎಂದು ನಮೂದಿಸಿರುತ್ತಾರೆ.

9. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

10. ಆ.ಸ.ನೌಕರರು ಕೊಳ್ಳೇಗಾಲ ನಗರಸಭೆಯ ಪೌರಾಯುಕ್ತರಾಗಿ ದಿನಾಂಕ: 21/07/2014 ರಿಂದ ಕರ್ತವ್ಯ ನಿರ್ವಹಿಸಿರುತ್ತಾರೆ.

11. ತನಿಖಾಧಿಕಾರಿಗಳು ಸಲ್ಲಿಸಿರುವ ಕಡತ 1 ಪುಟ ಸಂಖ್ಯೆ: 92, 135, 674 ರ ದಾಖಲೆಯಲ್ಲಿರುವ ವಾಣಿಜ್ಯ ಕಟ್ಟಡಕ್ಕೆ ಎದುರುದಾರರು ಪರವಾನಗಿ ನೀಡಿದ್ದು ಮುಖ್ಯ ರಸ್ತೆಯಲ್ಲಿರುವ ಕಟ್ಟಡಕ್ಕೆ ವ್ಯಾಪಾರಕ್ಕಾಗಿ ಬರುವ ಜನರಿಗೆ ವಾಹನ ನಿಲ್ಲಿಸಲು ಸ್ಥಳ ಅವಕಾಶವಿಲ್ಲದಂತಾಗಿ ರಸ್ತೆಯಲ್ಲಿ ನಿಲ್ಲಿಸುವಂತಾಗಿದೆ. ವಾಹನ ನಿಲುಗಡೆ ಸಲುವಾಗಿ ಸರಿಯಾದ ಸ್ಥಳವನ್ನು ಕಾಯ್ದಿರಿಸಿ ನಿಯಮಾನುಸಾರ ಷರತ್ತುಗಳನ್ನು ವಿಧಿಸಿ ಪರವಾನಗಿ ನೀಡಬೇಕಿದ್ದು ಆ.ಸ.ನೌಕರರು ಅಗತ್ಯವಾದ ಕ್ರಮವಹಿಸದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

12. ತನಿಖಾಧಿಕಾರಿಗಳು ಸಲ್ಲಿಸಿರುವ ಕಡತ 1 ಪುಟ ಸಂಖ್ಯೆ: 116, 242, 361, 384, 436, 572, 640, 674 ಹಾಗೂ 700 ದಾಖಲೆಯಲ್ಲಿರುವ ವಾಣಿಜ್ಯ ಕಟ್ಟಡಗಳನ್ನು ಅನಧಿಕೃತವಾಗಿ ನಿರ್ಮಿಸಿರುವುದಾಗಿ ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ನಮೂದಿಸಿದ್ದು ಸದರಿ ಅವಧಿಯಲ್ಲಿ ಆ.ಸ.ನೌಕರರು ಕರ್ತವ್ಯ ನಿರ್ವಹಿಸಿದ್ದು ಅನಧಿಕೃತ ನಿರ್ಮಾಣದ ವಿರುದ್ಧ ಅಗತ್ಯ ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

13. ತನಿಖಾಧಿಕಾರಿಗಳು ಸಲ್ಲಿಸಿರುವ ಕಡತ 1 ಪುಟ ಸಂಖ್ಯೆ: 414, 453, 509, 527, 532, 561 ದಾಖಲೆಯಲ್ಲಿರುವ ವಸತಿ ಕಟ್ಟಡಗಳನ್ನು ಅನಧಿಕೃತವಾಗಿ ನಿರ್ಮಿಸಿರುವುದಾಗಿ ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ನಮೂದಿಸಿದ್ದು ಸದರಿ ಅವಧಿಯಲ್ಲಿ

B

ಆ.ಸ.ನೌಕರರು ಕರ್ತವ್ಯ ನಿರ್ವಹಿಸಿದ್ದು ಅನಧಿಕೃತ ವಸತಿ ನಿರ್ಮಾಣದ ವಿರುದ್ಧ ಅಗತ್ಯ ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

14. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ನಮೂದಿಸಿದ 13 ಸ್ಥಳಗಳ ದಾಖಲೆಗಳನ್ನು ತನಿಖೆಗೆ ಹಾಜರುಪಡಿಸುವಂತೆ ಆ.ಸ.ನೌಕರರಿಗೆ ನೋಟೀಸು ನೀಡಿದ್ದು ಆ.ಸ.ನೌಕರರು ಸದರಿ ದಾಖಲೆಗಳನ್ನು ಹಾಜರುಪಡಿಸದೆ ವಿಚಾರಣೆಗಳಿಗೆ ಸಹಕರಿಸದೆ ಇರುವ ಬಗ್ಗೆ ವರದಿಯಲ್ಲಿ ತನಿಖಾಧಿಕಾರಿಗಳು ನಮೂದಿಸಿದ್ದು ಆ.ಸ.ನೌಕರರು ಅಗತ್ಯ ದಾಖಲೆಗಳನ್ನು ತನಿಖೆಗೆ ಹಾಜರುಪಡಿಸದೆ ಕರ್ತವ್ಯಲೋಪ ಎಸಗಿರುವುದು ಕಂಡುಬಂದಿರುತ್ತದೆ.

15. The Karnataka Municipalities Act 1964 ಕಲಂ 180, 187 ರೀತ್ಯಾ ಅಕ್ರಮ ಕಟ್ಟಡಗಳ ನಿರ್ಮಾಣಗಳ ಅವಧಿಯಲ್ಲಿ ಅಗತ್ಯ ಕ್ರಮ ವಹಿಸುವ ಹೊಣೆಗಾರಿಕೆ ಹಾಗೂ ಕರ್ತವ್ಯಗಳನ್ನು ಹೊಂದಿದ್ದು ಆ.ಸ.ನೌಕರರು ನಿಯಮಾನುಸಾರ ಅಗತ್ಯ ಕ್ರಮ ಜರುಗಿಸದೆ ಕರ್ತವ್ಯ ಲೋಪ ಎಸಗಿರುವುದು ಕಂಡುಬಂದಿರುತ್ತದೆ.

16. ಮೇಲಿನ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ.12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಆ.ಸ..ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರ ಅಡಿಯಲ್ಲಿ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶ ಮಾಡಿದ್ದು, ಉಪಲೋಕಾಯುಕ್ತರವರು ಇಲಾಖಾ ವಿಚಾರಣೆಗೆ ಅಪರ ನಿಬಂಧಕರು, ವಿಚಾರಣೆಗಳು–14 ರವರಿಗೆ ಆದೇಶಿಸಿರುತ್ತಾರೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

B

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 07/08/2021 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರು ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಕೊಳ್ಳೇಗಾಲ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಪ್ರದೇಶದ ಕಟ್ಟಡಗಳಲ್ಲಿ ಹಾಲಿ ನಡೆಯುತ್ತಿರುವ ವಾಣಿಜ್ಯ ಚಟುವಟಿಕೆಗಳು ಪುರಸಭಾ ಯೋಜನಾ ಪ್ರಾಧಿಕಾರದಿಂದ ಅನುಮೋದನೆಗೊಂಡಿರುವ ಯೋಜನೆಯಂತೆ ನಿಗದಿಪಡಿಸಲಾದ ಅಂಗಡಿ ಮಳಿಗೆಗಳಲ್ಲಿ ವಾಣಿಜ್ಯ ವಹಿವಾಟು ನಡೆಸುತ್ತಿದ್ದು, ವಾಣಿಜ್ಯಕ್ಕೆಂದು ನಿಗದಿಯಾಗಿರುವ ಪ್ರದೇಶದಲ್ಲಿ ಕನಿಷ್ಠ 30 ಅಡಿಯಿಂದ ಗರಿಷ್ಟ 40-50 ಅಡಿಗಳ ರಸ್ತೆಯಿದ್ದು ಸಾರ್ವಜನಿಕ ಸಂಚಾರಕ್ಕೆ ಯಾವುದೇ ತೊಂದರೆ ಇರುವುದಿಲ್ಲ. ರಸ್ತೆ 2 ಬದಿಗಳಲ್ಲಿ ದಿನಂಪ್ರತಿಯಂತೆ ಪ್ರತಿದಿನ ಪೋಲಿಸ್ ಇಲಾಖೆಯು ನಿಗದಿಪಡಿಸಿರುವಂತೆ ವಾಹನಗಳನ್ನು ರಸ್ತೆ ಬದಿಗಳಲ್ಲಿ ಸಾರ್ವಜನಿಕರು ಪಾರ್ಕಿಂಗ್ ಮಾಡುತ್ತಿದ್ದು, ದೂರುದಾರರು ದೂರಿರುವಂತೆ ಸಾರ್ವಜನಿಕರಿಗೆ ವಾಹನಗಳನ್ನು ಪಾರ್ಕಿಂಗ್ ಮಾಡಲು ಯಾವುದೇ ತೊಂದರೆ ಇರುವುದಿಲ್ಲ ಹಾಗೂ ವಸತಿ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸಲು ತಮ್ಮ ನಗರಸಭೆಯಿಂದ ಯಾವುದೇ ಅನುಮತಿ ನೀಡಿರುವುದಿಲ್ಲ ಎಂದು ಹೇಳಿರುತ್ತಾರೆ. ಆದ್ದರಿಂದ, ತಾನು ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂದು ಹೇಳಿರುತ್ತಾರೆ.

7. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು,

ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳಾದ ಶ್ರೀ. ಬಿ.ಜಿ ಕುಮಾರ ರವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.5 ರಿಂದ 8 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ ರವರು ತಮ್ಮ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ.

8. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

9. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1 ಮತ್ತು 2 :** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–3:** ಆದೇಶವೇನು?

10. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಭಾಗಶಃ ಸಕಾರಾತ್ಮಕವಾಗಿ.**
**ಅಂಶ 2: ಅಂತಿಮ ಆದೇಶದಂತೆ.**

## <u>ಕಾರಣಗಳು</u>

12. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಕೊಳ್ಳೇಗಾಲ ನಗರ ವ್ಯಾಪ್ತಿಯಲ್ಲಿ ಬರುವ

ವಾಸಸ್ಥಳದ ಜಾಗವನ್ನು ವಾಣಿಜ್ಯ ಸ್ಥಳವನ್ನಾಗಿ ಮಾರ್ಪಡಿಸಿಕೊಂಡು ಪಾರ್ಕಿಂಗ್ ವ್ಯವಸ್ಥೆ ಮಾಡಿಸದೇ ವ್ಯಾಪಾರ ನಡೆಸಲು ಆ.ಸ.ನೌ ರವರು ಅನುಮತಿಯನ್ನು ನೀಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಪಾರ್ಕಿಂಗ್ ವ್ಯವಸ್ಥೆ ಇಲ್ಲದೇ ಇರುವುದರಿಂದ ವಾಹನಗಳನ್ನು ಪಾರ್ಕ್ ಮಾಡಿದಾಗ ಪೋಲಿಸರು ಬಂದು ದಂಡ ವಸೂಲಿ ಮಾಡುತ್ತಿದ್ದಾರೆ ಇದರಿಂದ ಜನರಿಗೆ ಬಹಳ ತೊಂದಿರೆಯಾಗಿರುತ್ತದೆ ಅಂತಾ ನುಡಿದಿರುತ್ತಾರೆ. ನಿ.ಪಿ.1 ದೂರು; ನಿ.ಪಿ.2 ಫಾರಂ ನಂ.1 ಮತ್ತು ನಿ.ಪಿ.3 ಫಾರಂ ನಂ.2; ನಿ.ಪಿ.4 ಪ್ರತ್ಯುತ್ತರವನ್ನು ಗುರುತಿಸಿಕೊಂಡಿರುತ್ತಾರೆ.

13. ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರ ತನಿಖಾಧಿಕಾರಿಗಳಾದ ಶ್ರೀ. ಬಿ.ಜಿ ಕುಮಾರ ರವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.5 ರಿಂದ 8 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮಾನ್ಯ ಎಸ್.ಪಿ ಲೋಕಾಯುಕ್ತ ಮೈಸೂರು ರವರ ಆದೇಶದಂತೆ ದೂರುದಾರರು ಸಲ್ಲಿಸಿದ ದೂರಿನ ಆಧಾರದ ಮೇಲೆ ತನಿಖೆ ನಡೆಸಲು ಸೂಚಿಸಿದ್ದು, ಆ ಪ್ರಕಾರ ಇವರು ದಿ: 04/12/2017 ರಂದು ಆಯುಕ್ತರು ನಗರಸಭೆ ಕೊಳ್ಳೇಗಾಲ ಇವರಿಗೆ ಪತ್ರ ಬರೆದು ನಗರಸಭೆ ವ್ಯಾಪ್ತಿಯಲ್ಲಿ ಬರುವ ವಾಸಸ್ಥಾನದ ಕಟ್ಟಡಗಳಲ್ಲಿ ವಾಣಿಜ್ಯ ವ್ಯಾಪಾರ ನಡೆಸಲು ಅನುಮತಿ ನೀಡಿರುವ ಬಗ್ಗೆ ಹಾಗೂ ವಾಣಿಜ್ಯ ಕಟ್ಟಡಕ್ಕೆ ವಾಹನ ನಿಲುಗಡೆ ಪ್ರತ್ಯೇಕ ಜಾಗ ತೋರಿಸಿ ನೀಡಿರುವ ವಾಣಿಜ್ಯ ಮಳಿಗೆಗಳ ವಿವರ ಹಾಗೂ ಇವುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನೀಡುವಂತೆ ಹಾಗೂ ನಗರಸಭೆ ವ್ಯಾಪ್ತಿಯಲ್ಲಿ ಇಲ್ಲಿಯವರೆಗೆ ಆ.ಸ.ನೌ ರವರ ಅವಧಿಯಲ್ಲಿ ಎಷ್ಟು ಕಟ್ಟಡಗಳಿಗೆ ಅನುಮತಿ ನೀಡಿರುತ್ತಾರೆ ಎನ್ನುವ ಬಗ್ಗೆ ಮಾಹಿತಿಯನ್ನು ನೀಡಲು ಸೂಚಿಸಿರುತ್ತಾರೆ.

14. ಮುಂದುವರದು ತಮ್ಮ ಮುಖ್ಯ ವಿಚಾರಣೆಯಲ್ಲಿ ಆ.ಸ.ನೌ ರವರು ದಿ: 16/12/2017 ರಂದು ಒಂದು ಪತ್ರವನ್ನು ಬರೆದು ಕ್ರಮ ಸಂ.1 ರಿಂದ 6 ರವರೆಗೆ ವಾಸಸ್ಥಳದಲ್ಲಿ ವಾಣಿಜ್ಯ ಕಟ್ಟಡ ಕಟ್ಟಲು ಯಾವುದೇ ಪರವಾನಿಗೆಯನ್ನು ನೀಡಿರುವುದಿಲ್ಲವೆಂದು ಹಾಗೂ ಇವರ ಅನುಪಸ್ಥಿತಿಯಲ್ಲಿ ಸಹ ಬೇರೆ ಯಾರು ಕಟ್ಟಡ ಕಟ್ಟಲು ಅನುಮತಿ ನೀಡಿರುವುದಿಲ್ಲ ಎಂದು ತಿಳಿಸಿರುತ್ತಾರೆ. ದಿ: 21/02/2018 ರಂದು ತನಿಖಾಧಿಕಾರಿಗಳು ಹಾಗೂ ನಗರಸಭೆ ಸಿಬ್ಬಂದಿಯವರ ಜೊತೆಗೆ ಅಲ್ಲದೇ

ದೂರುದಾರರ ಜೊತೆಗೆ ನಿಲುಗಡೆ ವ್ಯವಸ್ಥೆ ಇಲ್ಲದೇ ಇರುವ ಕಟ್ಟಡಗಳಿಗೆ ಭೇಟಿ ನೀಡಿ ನಿ.ಪಿ.5 ರಂತೆ ಛಾಯಾಚಿತ್ರಗಳನ್ನು ತೆಗೆದಿದ್ದು ಹಾಗೂ ಸ್ಥಳವನ್ನು ಪರಿಶೀಲಿಸಿದಾಗ ವಾಹನಗಳು ನಿಲಲ್ಲು ನಿಲುಗಡೆ ವ್ಯವಸ್ಥೆ ಇಲ್ಲದೇ ಇರುವುದು, ವಾಹನಗಳು ತಿರುಗಾಡಲು ರಸ್ತೆ ಬಹಳ ಇಕ್ಕಟ್ಟಾಗಿರುವುದು ಕಂಡುಬಂದಿರುತ್ತದೆ ಅಂತಾ ನುಡಿದಿರುತ್ತಾರೆ.

15. ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ: 13/04/2018 ರಂದು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಪ್ರಾಧಿಕಾರ, ಚಾಮರಾಜನಗರ ಇವರಿಗೆ ಈ ಅರ್ಜಿಯ ಸಂಬಂಧವಾಗಿ ವಸತಿಯೇತರ ವಾಸಸ್ಥಳ ಮತ್ತು ವಾಣಿಜ್ಯ ಸ್ಥಳವೆಂದು ನಮೂದಿಸಿರುವ ಅನುಮೋದಿತ ನಕ್ಷೆಯನ್ನು ನೀಡುವಂತೆ ಪತ್ರ ವ್ಯವಹಾರ ಮಾಡಿದ್ದು, ಅವರು ದಿ: 19/05/2018 ರಂದು ಕಡತಗಳನ್ನು ಸಲ್ಲಿಸಿದ್ದು ಅದನ್ನು ನಿ.ಪಿ.6 ರಂತೆ (ಪುಟ ನಂ.15 ರಿಂದ 233) ಅಂತಾ ಗುರುತಿಸಲಾಗಿದೆ. ದಿ: 05/06/2018 ರಂದು ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಪ್ರಾಧಿಕಾರ, ಚಾಮರಾಜನಗರ ಇವರು ಉಳಿದ ಮಾಹಿತಿಯನ್ನು ನಿ.ಪಿ.7 ರಂತೆ (ಪುಟ ನಂ.234 ರಿಂದ 315) ರಂತೆ ನೀಡಿದ್ದು ಇರುತ್ತದೆ ಅಂತಾ ನುಡಿದಿರುತ್ತಾರೆ. ಮುಂದುವರೆದು ಮೇಲಿನ ದಾಖಲಾತಿ ಹಾಗೂ ಆ.ಸ.ನೌ ರವರಿಂದ ಪಡೆದುಕೊಂಡ ದಾಖಲಾತಿಯನ್ನು ಪರಿಶೀಲಿಸಿ ನಿ.ಪಿ.8 ರಂತೆ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ ಅಂತಾ ನುಡಿದಿರುತ್ತಾರೆ.

16. ಇವರ ವಿಚಾರಣಾ ವರದಿಯಲ್ಲಿ ಪೌರಾಯುಕ್ತರು, ನಗರಸಭೆ ಕಾರ್ಯಾಲಯ, ಕೊಳ್ಳೇಗಾಲ ಹಾಗೂ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಪ್ರಾಧಿಕಾರ, ಚಾಮರಾಜನಗರ ಪಡೆದ ವರದಿಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿ

   1) ಆ.ಸ.ನೌ ರವರು ಕರ್ತವ್ಯ ನಿರ್ವಹಿಸುತ್ತಿದ್ದಾಗ ನೀಡಿರುವ ದಾಖಲಾತಿಗಳಾದ ಕಡತ ನಂ.1 ಪುಟ ನಂ.92 ರಲ್ಲಿ ವಾಣಿಜ್ಯ ಕಟ್ಟಡ 2016 ರಲ್ಲಿ ಪರವಾನಿಗೆಯನ್ನು ನೀಡಿದ್ದು, ಸದರಿ ಕಟ್ಟಡವು ಮುಖ್ಯ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಾಗಿದ್ದು, ಸದರಿ ಕಟ್ಟಡವು 2 ಹಂತಸ್ತಿನ ಕಟ್ಟಡವಾಗಿದ್ದು ಸದರಿ ಕಟ್ಟಡದಲ್ಲಿ ವಾಣಿಜ್ಯ

ಮಳಿಗೆಗಳು ಇದ್ದು ವ್ಯಾಪಾರಕ್ಕಾಗಿ ಬಂದಂತಹ ಜನರು ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸುವಂತಹ ಪರಿಸ್ಥಿತಿ ಉಂಟಾಗಿರುತ್ತದೆ ಅಂತಾ ನುಡಿದಿರುತ್ತಾರೆ.

2) ಪುಟ ನಂ.674 ರಲ್ಲಿ ವಾಣಿಜ್ಯ ಕಟ್ಟಡಕ್ಕೆ 2014 ರಲ್ಲಿ ಪರವಾನಿಗೆಯನ್ನು ನೀಡಿದ್ದು, ಸದರಿ ಕಟ್ಟಡವು ಕಾವೇರಿ ರಸ್ತೆಯಲ್ಲಿದ್ದು, ಇಲ್ಲಿ ವಾಹನ ಸಂಚಾರವು ಹೆಚ್ಚಾಗಿದ್ದು ಸದರಿ ಜಾಗದಲ್ಲಿ ಈ ಹಿಂದೆ ಇದೇ ಜಾಗದಲ್ಲಿ ಮಂಗಳೂರು ಹಂಚಿನ ಮನೆ ಇದ್ದು, ಸದರಿ ಕಟ್ಟಡದಲ್ಲಿ ವಾಣಿಜ್ಯ ಮಳಿಗೆಗಳ ಕಟ್ಟಡ ನಿರ್ಮಿಸಿದ್ದು ವ್ಯಾಪಾರಕ್ಕಾಗಿ ಬಂದಂತಹ ಜನರಿಗೆ ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸುವಂತಹ ಪರಿಸ್ಥಿತಿ ಉಂಟಾಗಿರುತ್ತದೆ ಎಂದು ಹೇಳಿರುತ್ತಾರೆ.

3) ಪುಟ ನಂ.135 ರಲ್ಲಿ ವಾಣಿಜ್ಯ ಕಟ್ಟಡ 2016 ರಲ್ಲಿ ಆ.ಸ.ನೌ ರವರು ಪರವಾನಿಗೆಯನ್ನು ನೀಡಿದ್ದು ಸದರಿ ಕಟ್ಟಡವು ಗರಡಿ ಬೀದಿ ರಸ್ತೆಯಲ್ಲಿದ್ದು ಇಲ್ಲಿ ವಾಹನ ಸಂಚಾರ ಹೆಚ್ಚಾಗಿದ್ದು ಸದರಿ ಕಟ್ಟಡದಲ್ಲಿ ವಾಣಿಜ್ಯ ಮಳಿಗೆಗಳ ಕಟ್ಟಡ ನಿರ್ಮಿಸಿದ್ದು ಸದರಿ ಕಟ್ಟಡವು 2 ಅಂತಸ್ತಿನ ವಾಣಿಜ್ಯ ಮಳಿಗೆಗಳು ಇದ್ದು, ಸದರಿ ರಸ್ತೆಯ ಅಳತೆಯನ್ನು ಮಾಡಲಾಗಿ ಸುಮಾರು 22 ಅಡಿ ರಸ್ತೆಯಾಗಿದ್ದು ಸದರಿ ರಸ್ತೆಯಲ್ಲಿ ವ್ಯಾಪಾರಕ್ಕಾಗಿ ಬಂದಂತಹ ಜನರಿಗೆ ವಾಹನಗಳನ್ನು ರಸ್ತೆಯಲ್ಲಿ ನಿಲ್ಲುವಂತಹ ಪರಿಸ್ಥಿತಿ ಉಂಟಾಗಿರುತ್ತದೆ ಅಂತಾ ಹೇಳಿರುತ್ತಾರೆ.

4) ಅದರಂತೆ ಪುಟ ನಂ.116 ರಲ್ಲಿ 2016 ರಲ್ಲಿ ಈ ಕೆಳಗಿನಂತೆ ಅನಧೀಕೃತ ವಾಣಿಜ್ಯ ಹಾಗೂ ವಸತಿ ಕಟ್ಟಡಗಳಿಗೆ ಆ.ಸ.ನೌ ರವರ ಅವಧಿಯಲ್ಲಿ ಆಗಿದ್ದು ಕಂಡುಬರುತ್ತದೆ ಅಂತಾ ಹೇಳಿರುತ್ತಾರೆ.

i. ಪುಟ ನಂ.242 ರಲ್ಲಿ 2016 ರಲ್ಲಿ ಅನಧಿಕೃತ ವಾಣಿಜ್ಯ ಕಟ್ಟಡ.

ii. ಪುಟ ನಂ.116 ರಲ್ಲಿ 2016 ರಲ್ಲಿ ಅನಧಿಕೃತ ವಾಣಿಜ್ಯ ಕಟ್ಟಡ.

iii. ಪುಟ ನಂ.361 ರಲ್ಲಿ 2015 ರಲ್ಲಿ ಅನಧಿಕೃತ ವಾಣಿಜ್ಯ ಕಟ್ಟಡ.

iv. ಪುಟ ನಂ.384 ರಲ್ಲಿ 2017 ರಲ್ಲಿ ಅನಧಿಕೃತ ವಾಣಿಜ್ಯ ಕಟ್ಟಡ.

v. ಪುಟ ನಂ.572 ರಲ್ಲಿ 2016 ರಲ್ಲಿ ಅನಧಿಕೃತ ವಾಣಿಜ್ಯ ಕಟ್ಟಡ.

vi. ಪುಟ ನಂ.640 ರಲ್ಲಿ 2017 ರಲ್ಲಿ ಅನಧಿಕೃತ ವಾಣಿಜ್ಯ ಕಟ್ಟಡ.

vii. ಪುಟ ನಂ.674 ರಲ್ಲಿ 2014 ರಲ್ಲಿ ಅನಧಿಕೃತ ವಾಣಿಜ್ಯ ಕಟ್ಟಡ.

viii. ಪುಟ ನಂ.700 ರಲ್ಲಿ 2016 ರಲ್ಲಿ ಅನಧಿಕೃತ ವಾಣಿಜ್ಯ ಕಟ್ಟಡ.

ix. ಪುಟ ನಂ.414 ರಲ್ಲಿ 2016 ರಲ್ಲಿ ಅನಧಿಕೃತ ವಸತಿ ಕಟ್ಟಡ.

x. ಪುಟ ನಂ.436 ರಲ್ಲಿ 2016 ರಲ್ಲಿ ಅನಧಿಕೃತ ವಸತಿ ಕಟ್ಟಡ.

xi. ಪುಟ ನಂ.453 ರಲ್ಲಿ 2017 ರಲ್ಲಿ ಅನಧಿಕೃತ ವಸತಿ ಕಟ್ಟಡ.

xii. ಪುಟ ನಂ.509 ರಲ್ಲಿ 2017 ರಲ್ಲಿ ಅನಧಿಕೃತ ವಸತಿ ಕಟ್ಟಡ.

xiii. ಪುಟ ನಂ.527 ರಲ್ಲಿ 2016 ರಲ್ಲಿ ಅನಧಿಕೃತ ವಸತಿ ಕಟ್ಟಡ.

xiv. ಪುಟ ನಂ.532 ರಲ್ಲಿ 2016 ರಲ್ಲಿ ಅನಧಿಕೃತ ವಸತಿ ಕಟ್ಟಡ.

xv. ಪುಟ ನಂ.561 ರಲ್ಲಿ 2016 ರಲ್ಲಿ ಅನಧಿಕೃತ ವಸತಿ ಕಟ್ಟಡ.

17. ಮುಂದುವರೆದು ತಮ್ಮ ವರದಿಯಲ್ಲಿ ವಿಚಾರಣಾ ಕಾಲದಲ್ಲಿ ಇವರು ಕೇಳಿರುವ 47 ಸ್ಥಳಗಳ ಪೈಕಿ 1 ರಿಂದ 4, 9, 14, 18, 23, 24, 42, 46, 49, 50 ಒಟ್ಟು 13 ಸ್ಥಳಗಳ ದಾಖಲೆ ನೀಡದೇ ಅರ್ಜಿ ವಿಚಾರಣೆಗೆ ಸಹಕರಿಸದೇ ಕಛೇರಿಯಲ್ಲಿ ಲಭ್ಯವಿರುವ 33 ದಾಖಲೆಗಳನ್ನು ನೀಡಿರುವುದು ವಿಚಾರಣೆಯಲ್ಲಿ ಕಂಡುಬಂದಿರುತ್ತದೆ ಅಂತಾ ನುಡಿದಿರುತ್ತಾರೆ. ಈ ಮೇಲಿನ ದಾಖಲೆಗಳನ್ನು ಆ.ಸ.ನೌ ರವರು ಸಲ್ಲಿಸಿದ್ದು ಇವುಗಳು ವರದಿಯ ಒಂದು ಭಾಗವಾಗಿರುತ್ತದೆ.

18. ಆ.ಸ.ನೌ ರವರು ಪಿ.ಡಬ್ಲ್ಯೂ.1 ಇವರ ಪಾಟಿಸವಾಲಿನಲ್ಲಿ ವಾಸಸ್ಥಳವನ್ನು ವಾಣಿಜ್ಯ ಸ್ಥಳವಾಗಿ ಪರಿವರ್ತನೆ ಮಾಡಲು ಟೌನ್ ಪ್ಲಾನಿಂಗ್ ಪ್ರಾಧಿಕಾರಕ್ಕೆ ಅಧಿಕಾರವಿದ್ದು, ಟೌನ್ ಪ್ಲಾನಿಂಗ್ ಪ್ರಾಧಿಕಾರವು ಈ ರೀತಿ ಆದೇಶ ಮಾಡಿದ ನಂತರ ಆ.ಸ.ನೌ ರವರಿಗೆ ಬದಲಾವಣೆ ಮಾಡಲು ಯಾವುದೇ ಅಧಿಕಾರ ಇರುವುದಿಲ್ಲ ಎಂದು ಮಾಡಿದ ಸಲಹೆಗೆ ಪಿ.ಡಬ್ಲ್ಯೂ.1 ಇವರು ಟೌನ್ ಪ್ಲಾನಿಂಗ್ ಪ್ರಾಧಿಕಾರವು ಈ ರೀತಿ ಯಾವುದೇ ಆದೇಶವನ್ನು ಮಾಡಿರುವುದಿಲ್ಲ ಅಂತಾ

ನುಡಿದಿರುತ್ತಾರೆ. ಅಲ್ಲದೇ ಟೌನ್ ಪ್ಲಾನಿಂಗ್ ಪ್ರಾಧಿಕಾರವು ಒಂದು ಸಿ.ಡಿ.ಪಿ ಮ್ಯಾಪ್‌ನ್ನು ಮಾಡುತ್ತಾರೆ ಅದಲ್ಲಿ ವಾಣಿಜ್ಯ ಕಟ್ಟಡಗಳು ಯಾವುವು ಹಾಗೂ ವಸತಿ ಕಟ್ಟಡವು ಯಾವುವು ಇರುತ್ತದೆ ಎನ್ನುವ ಬಗ್ಗೆ ಪಿ.ಡಬ್ಲ್ಯೂ.1 ಇವರು ಸಿಟಿ ಡೆವಲೆಪ್‌ಮೆಂಟ್ ನಕ್ಷೆಯನ್ನು ಹಾಜರುಪಡಿಸಿರುವುದಿಲ್ಲ ಅಂತಾ ವಾದ ಮಂಡಿಸಿರುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ದಾಖಲೆಗಳು ಆ.ಸ.ನೌ ರವರ ವಶದಲ್ಲಿದ್ದು ಹಾಜರುಪಡಿಸಲು ಅವರಿಗೆ ಯಾವುದೇ ತೊಂದರೆಗಳು ಇರದಿದ್ದರೂ ಸಹ ಅವರು ತಮ್ಮ ವಾದವನ್ನು ಪುರಸ್ಕರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

19. ಮುಂದುವರೆದು ಪಿ.ಡಬ್ಲ್ಯೂ.1 ಇವರ ಪಾಟಿಸವಾಲಿನಲ್ಲಿ ವಾಸಸ್ಥಳದ ಕಟ್ಟಡವು ವಾಣಿಜ್ಯ ಕಟ್ಟಡಕ್ಕಾಗಿ ಪರಿವರ್ತನೆಯನ್ನು ಮಾಡಿಕೊಂಡಾದ ಯಾರಿಗೂ ತೊಂದರೆ ಆಗಿರುವುದಿಲ್ಲ ಅಂತಾ ಮಾಡಿದ ಸಲಹೆಗೆ ಪಿ.ಡಬ್ಲ್ಯೂ.1 ಇವರು ವಾಣಿಜ್ಯ ಕಟ್ಟಡಕ್ಕೆ ಬಂದ ಜನರಿಗೆ ನಿಲುಗಡೆ ವ್ಯವಸ್ಥೆ ಇಲ್ಲದ ಕಾರಣ ತೊಂದರೆಯಾಗಿರುತ್ತದೆ ಹಾಗೂ ತನಗೂ ಸಹ ತೊಂದರೆಯಾಗಿದ್ದರಿಂದ ಈ ದೂರನ್ನು ಸಲ್ಲಿಸಿರುತ್ತೇನೆ ಅಂತಾ ನುಡಿದಿರುತ್ತಾರೆ.

20. ಆ.ಸ.ನೌ ರವರು ಪಿ.ಡಬ್ಲ್ಯೂ.2 ಇವರ ಪಾಟಿಸವಾಲಿನಲ್ಲಿ ಆ.ಸ.ನೌ ರವರು ವಾಣಿಜ್ಯ ಕಟ್ಟಡ ಕಟ್ಟುವುದಕ್ಕೆ ಪರವಾನಿಗೆ ನೀಡುವ ಸಂದರ್ಭದಲ್ಲಿ ನಿಲುಗಡೆ ಸ್ಥಳ ಕಾಯ್ದಿರಿಸಬೇಕೆಂದು ಯಾವುದೇ ನಿಯಮ ಇರಲಿಲ್ಲ ಅಂತಾ ಮಾಡಿದ ಸಲಹೆಗೆ ಪಿ.ಡಬ್ಲ್ಯೂ.2 ಇವರು ಅಲ್ಲಗಳೆದಿರುತ್ತಾರೆ. ಈ ರೀತಿ ಪರವಾನಗಿ ಬೇಕಾಗಿರುತ್ತದೆ ಅಂತಾ ತೋರಿಸಲು ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಆ.ಸಾ.ನೌ. ರವರು ವಾಸ ಸ್ಥಾನ ಕಟ್ಟಡದಲ್ಲಿ ವಾಣಿಜ್ಯ ವ್ಯಾಪಾರ ನಡೆಸಲು ಸಂಬಂಧಪಟ್ಟಂತೆ, ನಿಲುಗಡೆ ವ್ಯವಸ್ಥೆ ಮಾಡಿಸದೇ ವ್ಯಾಪಾರ ಮಾಡಲು ಅನುಮತಿ ನೀಡಿರುತ್ತಾರೆ ಅನ್ನುವ ಬಗ್ಗೆ ರುಜುವಾತು ಪಡಿಸಿರುವುದಿಲ್ಲ.

21. ಮುಂದುವರಿದು ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಮೇಲೆ ಹೇಳಿದ ಹಾಗೆ ಆ.ಸಾ.ನೌ. ರವರು ತಮ್ಮ ಅವಧಿಯಲ್ಲಿ ಕೆಲವೊಂದು ವಾಣಿಜ್ಯ ಕಟ್ಟಡಕ್ಕೆ ಹಾಗೂ ವಸತಿ ಕಟ್ಟಡಕ್ಕೆ ಅನಧಿಕೃತವಾಗಿ (ಪ್ಯಾರಾ ನಂ. 16 ರ ವಿಚಾರಣೆ ವರದಿಯಲ್ಲಿ ಹೇಳಿದ ಹಾಗೆ) ಪರವಾನಿಗೆ ನೀಡಿದ್ದು ಕಂಡುಬಂದಿರುತ್ತದೆ. ಈ ವಿಷಯದ ಬಗ್ಗೆ ಮತ್ತು ದಾಖಲಾತಿಗಳ ಬಗ್ಗೆ ಆ.ಸಾ.ನೌ. ರವರು ಅಲ್ಲಗಳೆದಿರುವುದಿಲ್ಲ ಅಲ್ಲದೇ ಅನಧಿಕೃತ ಕಟ್ಟಡದ ನಿರ್ಮಾಣದ ವಿರುದ್ಧ ಅ.ಸಾನೌ. ರವರು ಅಗತ್ಯ ಕ್ರಮ ಜರುಗಸದೇ ಇರುವುದು ಕಂಡುಬಂದಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಈ ಆಪಾದನೆಯನ್ನು ರುಜುವಾತುಪಡಿಸಿರುತ್ತಾರೆ.

22. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಭಾಗಶಃ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

23. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌ ರಾದ **ಶ್ರೀ. ಡಿ.ಕೆ ಲಿಂಗರಾಜು,** ಹಿಂದಿನ ಪೌರಾಯುಕ್ತರು, ನಗರಸಭೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರ ವಿರುದ್ಧ ಆಪಾದಿಸಲಾದ ಆರೋಪಗಳಾದ ಕೆಲವೊಂದು ವಾಣಿಜ್ಯ ಕಟ್ಟಡಕ್ಕೆ ಹಾಗೂ ವಸತಿ ಕಟ್ಟಡಕ್ಕೆ ಅನಧಿಕೃತ ಪರವಾನಿಗೆ ನೀಡಿದ್ದು, ಅಲ್ಲದೇ ಅನಧಿಕೃತ ಕಟ್ಟಡದ ನಿರ್ಮಾಣದ ವಿರುದ್ಧ ಅಗತ್ಯ ಕ್ರಮಗಳನ್ನು ಜರುಗಿಸದೇ ಇರುತ್ತಾರೆ ಅಂತಾ ಶಿಸ್ತುಪ್ರಾಧಿಕಾರವು ಭಾಗಶಃ ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌ ರವರ ನಿವೃತ್ತಿ ದಿನಾಂಕ: 31/05/2029 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

31/12/22.

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. M Dasharath S/o Late K Madaiah, Kollegala Post & Taluk, Chamarajanagar District (Original) |
| | **PW-2** | Sri. B.G Kumar S/o Govinda Shetty, Police Inspector, Hassan (Original) |
| 2 | **Documents marked on behalf of the Disciplinary Authority Ex.P-1 to Ex.P-8** | |
| | **Ex.P.1** | Complaint given to this institution dtd: 03/05/2017. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | Rejoinder dtd: 08/11/2017. |
| | **Ex.P.5** | Xerox copy of photographs. |
| | **Ex.P.6** | Investigation report dtd: 19/05/2018 with enclosures. |
| | **Ex.P.7** | Letter dtd: 05/06/2018 submitted by Assistant Director, U&RDD, Chamarajanagar. |
| | **Ex.P.8 & 8(a)** | Report of investigation Officer with enclosures and signature . |

Dated this the 31st December 2022

31/12/22

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.